ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
VISVESVARAYA JALA NIGAM LIMITED
(A Government of Karnataka Enterprise)

ದಿನಾಂಕ:15/3/2017

ಸಂಖ್ಯೆ:ವಿಜನಿನಿ/ಸಮಿತಿ ರಚನೆ/2017/516

# ಅಧಿಕೃತ ಜ್ಞಾಪನ

**ವಿಷಯ:** ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಅಡಿಯಲ್ಲಿ ವಿವಿಧ ಹಂತಗಳ ಅಂದಾಜು ಪರಿಶೀಲನಾ ಸಮಿತಿ (Estimate Review Committee - ERC) ಹಾಗೂ ಟೆಂಡರ್ ಪರಿಶೀಲನಾ ಸಮಿತಿ (Tender Scrutiny Committee - Tr.Sc.Com) ರಚಿಸುವ ಬಗ್ಗೆ.

**ಉಲ್ಲೇಖ:**
1) ಸರ್ಕಾರದ ಆದೇಶ ಸಂ: ಜಸಇ 253 ಕೆಬಿಎನ್ 2013, ಬೆಂಗಳೂರು ದಿನಾಂಕ 28/10/2013.
2) ಸರ್ಕಾರದ ಆದೇಶ ಸಂ: ಜಸಂಇ 35 ವಿಬ್ಯಾಇ 2016, ಬೆಂಗಳೂರು ದಿನಾಂಕ 20/8/2016.
3) ದಿನಾಂಕ 10/11/2016 ರಂದು ಜರುಗಿದ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ನಿರ್ದೇಶಕರ ಮಂಡಳಿಯ 1ನೇ ಸಭೆಯ ನಡಾವಳಿ.
4) ನಿಗಮದ ಅಧಿಕೃತ ಜ್ಞಾಪನ ಪತ್ರ ಸಂ.023 ದಿನಾಂಕ: 24/12/2016.
5) ಈ ಕಛೇರಿ ಪತ್ರ ಸಂ: ವಿಜನಿನಿ/ಸಮಿತಿಗಳ ರಚನೆ/2016-17/379 ದಿ:28/2/2017.
6) ಸರ್ಕಾರದ ಪತ್ರ ಸಂಖ್ಯೆ:ಜಸಂಇ/43/ವಿಬ್ಯಾಇ/2017 ದಿ:13/3/2017.

Go file

*****

**ಪ್ರಸ್ತಾವನೆ :**

ಜಲ ಸಂಪನ್ಮೂಲ ಇಲಾಖೆಯಲ್ಲಿ ವಿವಿಧ ನಿಗಮಗಳಿಗೆ ವಹಿಸಿರುವ ಯೋಜನಾ ಕಾಮಗಾರಿಗಳನ್ನು ಯೋಜನೆಯ ಪರಿಕಲ್ಪನೆಯಿಂದ ಅನುಷ್ಠಾನ ಹಂತದವರೆವಿಗೂ ಕಾರ್ಯಪ್ರಕ್ರಿಯೆಗಳನ್ನು ಸರಳವಾಗಿ ಮತ್ತು ತ್ವರಿತಗೊಳಿಸಲು ಅನುವಾಗುವಂತೆ ವ್ಯವಸ್ಥೆ ರೂಪಿಸುವ ನಿಟ್ಟಿನಲ್ಲಿ ಹಾಗೂ ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ನಿಯಮಗಳನ್ನು ಟೆಂಡರ್ ಪ್ರಕ್ರಿಯೆಗಳಲ್ಲಿ ಅಳವಡಿಸಿಕೊಂಡು ಏಕರೂಪ ಪದ್ಧತಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುವು ಮಾಡಿಕೊಡುವ ಸಲುವಾಗಿ ತಾಂತ್ರಿಕ ಉಪ ಸಮಿತಿ (Technical Sub Committee - TSC), ಅಂದಾಜು ಪರಿಶೀಲನಾ ಸಮಿತಿ (Estimate Review Committee-ERC) ಹಾಗೂ ಟೆಂಡರ್ ಪರಿಶೀಲನಾ ಸಮಿತಿಗಳನ್ನು (Tender Scrutiny Committee-TSC) ನಿಗಮಗಳ ವಿವಿಧ ಅಧಿಕಾರಿಗಳ ಮಟ್ಟದಲ್ಲಿ ರಚಿಸಲು ಸರ್ಕಾರ ಉಲ್ಲೇಖ(1)ರ ಆದೇಶದಲ್ಲಿ ನಿರ್ದೇಶಿಸಿರುತ್ತದೆ.

ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಈ ಯೋಜನೆಗಳಿಗೆ ಸಂಬಂಧಿಸಿದ ಮತ್ತು ಉದ್ದೇಶಿತ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳ ಬರಪೀಡಿತ ಪ್ರದೇಶಗಳಿಗೆ ಉಪಯುಕ್ತವಾಗುವಂತಹ/ಪೂರಕವಾಗಿರುವಂತಹ ಮತ್ತು ಚಾಲ್ತಿಯಲ್ಲಿರುವಂತಹ ಇತರೆ ಯೋಜನಾ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮತ್ತು ನಿರ್ವಹಣೆಗಾಗಿ ವಿಶ್ವೇಶ್ವರಯ್ಯ ಜಲ ನಿಗಮವನ್ನು ಸ್ಥಾಪಿಸಲಾಗಿದೆ.

...a Neeravari Nigam Limited, No.1, Coffeeboard Building, 4th Floor, Dr. B.R. Ambedkar Veedhi, B'lore - 1
Ph: 080-2283074-78 Fax: 080-2836015 Email : mail@vjnl.in Website : www.vjnl.in
CIN : U41000KA2016SGC097260

ಈ ಹಿನ್ನೆಲೆಯಲ್ಲಿ ಹೊಸದಾಗಿ ಅಸ್ಥಿತ್ವಕ್ಕೆ ಬಂದಿರುವ ವಿಶ್ವೇಶ್ವರಯ್ಯ ಜಲ ನಿಗಮದ ಅಡಿಯಲ್ಲಿ ಸದರಿ ನಿಗಮದ ವ್ಯಾಪ್ತಿಯಲ್ಲಿನ ಯೋಜನೆಗಳ ಅನುಷ್ಠಾನ ಮತ್ತು ನಿರ್ವಹಣೆಗಾಗಿ ತಾಂತ್ರಿಕ ಮಾರ್ಗದರ್ಶನ, ಸಲಹೆ ಸೂಚನೆಗಳು, ಪ್ರಸ್ತಾವನೆಗಳ ಪರಿಶೀಲನೆ, ಅವುಗಳ ಅವಶ್ಯಕ ತೀರುವಳಿ ಮತ್ತು ಅನುಮೋದನೆಗಳಿಗಾಗಿ ಈ ನಿಗಮದ ಕಾರ್ಯವ್ಯಾಪ್ತಿಯ ಯೋಜನೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗದರ್ಶಿ ಸೂತ್ರಗಳ ಅನುಸಾರ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ತಾಂತ್ರಿಕ ಉಪ ಸಮಿತಿಯನ್ನು ರಚಿಸಲು ಉಲ್ಲೇಖ (3)ರ ಮೂಲಕ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ 1ನೇ ನಿರ್ದೇಶಕರ ಮಂಡಳಿಯು ಅನುಮೋದಿಸಿದ್ದು, ಇದರನ್ವಯ ಉಲ್ಲೇಖ (4) ರಲ್ಲಿ ಈಗಾಗಲೇ ನಿಗಮದ ತಾಂತ್ರಿಕ ಉಪಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.

ಮುಂದುವರೆದು, ನಿಗಮದ ವಿವಿಧ ಹಂತಗಳ ಅಂದಾಜು ಪರಿಶೀಲನಾ ಸಮಿತಿ ಮತ್ತು ಟೆಂಡರ್ ಪರಿಶೀಲನಾ ಸಮಿತಿಗಳನ್ನು ರಚಿಸಲು ಸಹ ನಿಗಮದ ಮೊದಲನೇ ನಿರ್ದೇಶಕರ ಮಂಡಳಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ವ್ಯವಸ್ಥಾಪಕ ನಿರ್ದೇಶಕರಿಗೆ ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

ಇದರನ್ವಯ ಉಲ್ಲೇಖ(5)ರ ಪತ್ರದಲ್ಲಿ ನಿಗಮದ ವಿವಿಧ ಹಂತಗಳ ಅಂದಾಜು ಪರಿಶೀಲನಾ ಸಮಿತಿ ಮತ್ತು ಟೆಂಡರ್ ಪರಿಶೀಲನಾ ಸಮಿತಿಗಳನ್ನು ರಚಿಸಿ ಆದೇಶಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಪ್ರಸ್ತುತ ಉಲ್ಲೇಖಿತ(6) ರ ಪತ್ರದಲ್ಲಿ ಸರ್ಕಾರವು ವಿಶ್ವೇಶ್ವರಯ್ಯ ಜಲ ನಿಗಮದಡಿ ಬರುವ ವಿವಿಧ ಹಂತಗಳ ಅಂದಾಜು ಪರಿಶೀಲನಾ ಸಮಿತಿ (Estimate Review Committee- ERC) ಹಾಗೂ ಟೆಂಡರ್ ಪರಿಶೀಲನಾ ಸಮಿತಿ ( Tender Scrutiny Committee- Tr.Sc.Com) ಗಳಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸಿ ಉಲ್ಲೇಖ(1) ರ ಸರ್ಕಾರದ ಆದೇಶ ದಿನಾಂಕ:28/10/2013 ರನ್ವಯ ಈ ಸಮಿತಿಗಳನ್ನು ರಚಿಸಲು ಅನುಮತಿ ನೀಡಿದೆ.

ಈ ಹಿನ್ನೆಲೆಯಲ್ಲಿ ಹೊಸದಾಗಿ ಅಸ್ಥಿತ್ವಕ್ಕೆ ಬಂದಿರುವ ವಿಶ್ವೇಶ್ವರಯ್ಯ ಜಲ ನಿಗಮದ ಅಡಿಯಲ್ಲಿ ಸದರಿ ನಿಗಮದ ವ್ಯಾಪ್ತಿಯಲ್ಲಿನ ಯೋಜನೆಗಳ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ಹಾಗೂ ಡಿ.ಟಿ.ಪಿ. ಗಳನ್ನು ಪರಿಶೀಲಿಸಿ ತೀರುವಳಿ ನೀಡಲು ಹಾಗೂ ಟೆಂಡರ್‌ಗಳನ್ನು ಪರಿಶೀಲಿಸಿ ನಿರ್ವಹಿಸಲು ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿನ ನಿರ್ದೇಶನಗಳಿಗೆ ಒಳಪಟ್ಟು ವಿವಿಧ ಹಂತಗಳ ಸಮಿತಿಗಳ ಕಾರ್ಯವ್ಯಾಪ್ತಿಯನ್ನು ಅಳವಡಿಸಿಕೊಂಡು ಸರ್ಕಾರದ ಮಾರ್ಗದರ್ಶಿ ಸೂತ್ರಗಳ ಅನುಸಾರ ಕಾರ್ಯನಿರ್ವಹಿಸಲು ನಿಗಮದ ವಿವಿಧ ಹಂತಗಳ ಅಂದಾಜು ಪರಿಶೀಲನಾ ಸಮಿತಿ (Estimate Review Committee- ERC) ಹಾಗೂ ಟೆಂಡರ್ ಪರಿಶೀಲನಾ ಸಮಿತಿ (Tender Scrutiny Committee- Tr.Sc.Com) ಗಳನ್ನು ರಚಿಸಲು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಗಿನಂತೆ ಆದೇಶಿಸಲಾಗಿದೆ.

## : ಆದೇಶ :

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಈ ಯೋಜನೆಗಳಿಗೆ ಸಂಬಂಧಿಸಿದ ಇತರೆ ಯೋಜನಾ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮತ್ತು ನಿವರ್ಹಣೆಗಾಗಿ ಸ್ಥಾಪಿಸಲಾಗಿರುವ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ವ್ಯಾಪ್ತಿಯಲ್ಲಿನ ಯೋಜನೆಗಳ ಅನುಷ್ಠಾನ ಮತ್ತು ನಿರ್ವಹಣೆಗಾಗಿ ತಾಂತ್ರಿಕ ಮಾರ್ಗದರ್ಶನ, ಸಲಹೆ ಸೂಚನೆಗಳು, ಪ್ರಸ್ತಾವನೆಗಳ ಪರಿಶೀಲನೆ, ಅವುಗಳ ಅವಶ್ಯಕ ತೀರುವಳಿ ಮತ್ತು ಅನುಮೋದನೆಗಳಿಗಾಗಿ ಸರ್ಕಾರದ ಆದೇಶ ಸಂ: ಜಸಇ 253 ಕೆಬಿಎನ್ 2013, ಬೆಂಗಳೂರು ದಿನಾಂಕ 28/10/2013 ರಲ್ಲಿನ ವಿವಿಧ ಹಂತಗಳ ಸಮಿತಿಗಳ ಕಾರ್ಯವ್ಯಾಪ್ತಿ ಮತ್ತು ಮಾರ್ಗದರ್ಶಿ ಸೂತ್ರಗಳ ಅನುಸಾರ ಕಾರ್ಯನಿರ್ವಹಿಸಲು ಉಲ್ಲೇಖ(6)ರ ಸರ್ಕಾರದ ಪತ್ರದಲ್ಲಿ ನೀಡಿರುವ ಅನುಮೋದನೆಯಂತೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ವಿವಿಧ ಹಂತಗಳ ಅಂದಾಜು ಪರಿಶೀಲನಾ ಸಮಿತಿ (Estimate Review Committee- ERC) ಹಾಗೂ ಟೆಂಡರ್ ಪರಿಶೀಲನಾ ಸಮಿತಿಗಳನ್ನು (Tender Scrutiny Committee- Tr.Sc.Com) ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಗಿನಂತೆ ರಚಿಸಿ ಆದೇಶಿಸಲಾಗಿದೆ.

### ಅಂದಾಜು ಪರಿಶೀಲನಾ ಸಮಿತಿಗಳು

I. ರೂ.5.00 ಕೋಟಿಗಳ ಮಿತಿಗೊಳಪಟ್ಟು ಅಂದಾಜುಗಳನ್ನು ಪರಿಶೀಲಿಸಲು ಭದ್ರಾ ಮೇಲ್ದಂಡೆ ಯೋಜನೆ ವಲಯ, ಚಿತ್ರದುರ್ಗ ಮಟ್ಟದಲ್ಲಿ ಕೆಳಕಂಡ ಅಂದಾಜು ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

| ಕ್ರ. ಸಂ. | ಹುದ್ದೆ | ಅಧಿಕಾರಿಗಳು / ತಾಂತ್ರಿಕ ತಜ್ಞರು |
|---|---|---|
| 1 | ಅಧ್ಯಕ್ಷರು | ಸಂಬಂಧಿಸಿದ ವಲಯದ ಮುಖ್ಯ ಇಂಜಿನೀಯರ |
| 2. | ಸದಸ್ಯರು-1 | ಸಂಬಂಧಿಸಿದ ವಲಯದ ಅಧೀಕ್ಷಕ ಇಂಜಿನೀಯರ |
| 3. | ಸದಸ್ಯರು-2 | ಸಂಬಂಧಿಸಿದ ವಲಯದ ಗುಣ ನಿಯಂತ್ರಣ ವಿಭಾಗದ ಕಾರ್ಯಪಾಲಕ ಅಭಿಯಂತರರು |
| 4. | ಸದಸ್ಯರು-3 | ಪ್ರೊ:ವಿ.ಪಿ.ಹುಗ್ಗಿ, ಪ್ರಾಂಶುಪಾಲರು, ಫ.ಗು.ಹಳಕಟ್ಟಿ ತಾಂತ್ರಿಕ ಮಹಾವಿದ್ಯಾಲಯ, ವಿಜಯಪುರ |
| 5. | ಸದಸ್ಯರು-4 | ಶ್ರೀ.ಪಿ.ಕೆ.ರೂಪನಗುಡಿ, ನಿವೃತ್ತ ಮುಖ್ಯ ಇಂಜಿನಿಯರ್, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ. |
| 6. | ಸದಸ್ಯ ಕಾರ್ಯದರ್ಶಿ | ಯೋಜನೆಗೆ ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರು |

II. ರೂ.5.00 ಕೋಟಿಗಳ ಮಿತಿಗೊಳಪಟ್ಟು ಪ್ರಸ್ತಾವನೆಗಳನ್ನು ಪರಿಶೀಲಿಸಲು ಎತ್ತಿನ ಹೊಳೆ ಯೋಜನಾ ವಲಯ, ತುಮಕೂರು ಮಟ್ಟದಲ್ಲಿ ಕೆಳಕಂಡ ಅಂದಾಜು ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

| ಕ್ರ. ಸಂ. | ಹುದ್ದೆ | ಅಧಿಕಾರಿಗಳು / ತಾಂತ್ರಿಕ ತಜ್ಞರು |
|---|---|---|
| 1 | ಅಧ್ಯಕ್ಷರು | ಸಂಬಂಧಿಸಿದ ವಲಯದ ಮುಖ್ಯ ಇಂಜಿನೀಯರ |
| 2. | ಸದಸ್ಯರು-1 | ಸಂಬಂಧಿಸಿದ ವಲಯದ ಅಧೀಕ್ಷಕ ಇಂಜಿನೀಯರ |
| 3. | ಸದಸ್ಯರು-2 | ಸಂಬಂಧಿಸಿದ ವಲಯದ ಗುಣ ನಿಯಂತ್ರಣ ವಿಭಾಗದ ಕಾರ್ಯಪಾಲಕ ಅಭಿಯಂತರರು |
| 4. | ಸದಸ್ಯರು-3 | ಪ್ರೊ.ವಿ.ಪಿ.ಹುಗ್ಗಿ, ಪ್ರಾಂಶುಪಾಲರು, ಫ.ಗು.ಹಳಕಟ್ಟಿ ತಾಂತ್ರಿಕ ಮಹಾವಿದ್ಯಾಲಯ, ವಿಜಯಪುರ |
| 5. | ಸದಸ್ಯರು-4 | ಶ್ರೀ.ಹೆಚ್.ವಿ.ಈಶ್ವರಯ್ಯ ನಿವೃತ್ತ ತಾಂತ್ರಿಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ. |
| 6. | ಸದಸ್ಯ ಕಾರ್ಯದರ್ಶಿ | ಯೋಜನೆಗೆ ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರು |

III. ರೂ.5.00 ಕೋಟಿಗಳಿಗೂ ಮೀರಿದ ಪ್ರಸ್ತಾವನೆಗಳನ್ನು ಪರಿಶೀಲಿಸಲು ನಿಗಮ ಮಟ್ಟದಲ್ಲಿ ಕೆಳಕಂಡ ಅಂದಾಜು ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

| ಕ್ರ ಸಂ. | ಹುದ್ದೆ | ಅಧಿಕಾರಿಗಳು / ತಾಂತ್ರಿಕ ತಜ್ಞರು |
|---|---|---|
| 1 | ಅಧ್ಯಕ್ಷರು | ನಿಗಮದ ವ್ಯವಸ್ಥಾಪಕ ನಿರ್ದೇಶಕರು |
| 2. | ಸದಸ್ಯ ಕಾರ್ಯದರ್ಶಿ | ಸಂಬಂಧಿಸಿದ ಮುಖ್ಯ ಅಭಿಯಂತರರು |
| 3. | ಸದಸ್ಯರು-1 | ಸಂಬಂಧಿಸಿದ ಅಧೀಕ್ಷಕ ಅಭಿಯಂತರರು |
| 4. | ಸದಸ್ಯರು-2 | ಸಂಬಂಧಿಸಿದ ಗುಣ ನಿಯಂತ್ರಣ ವಿಭಾಗದ ಕಾರ್ಯಪಾಲಕ ಅಭಿಯಂತರರು |
| 5. | ಸದಸ್ಯರು-3 | ಪ್ರೊ:ವಿ.ಪಿ.ಹುಗ್ಗಿ, ಪ್ರಾಂಶುಪಾಲರು, ಫ.ಗು.ಹಳಕಟ್ಟಿ ತಾಂತ್ರಿಕ ಮಹಾವಿದ್ಯಾಲಯ, ವಿಜಯಪುರ |
| 6. | ಸದಸ್ಯರು-4 | ಶ್ರೀ.ಜೆ.ಆರ್.ಕೆ.ಕರಡಿ, ನಿವೃತ್ತ ಪ್ರಧಾನ ಇಂಜಿನಿಯರ್, |
| 7. | ಸದಸ್ಯರು-5 | ಶ್ರೀ.ಪಿ.ಕೆ.ರೂಪನಗುಡಿ, ನಿವೃತ್ತ ಮುಖ್ಯ ಇಂಜಿನಿಯರ್, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ |

## ಟೆಂಡರ್ ಪರಿಶೀಲನಾ ಸಮಿತಿಗಳು

I. ರೂ. 2.50 ಕೋಟಿಗಳವರೆಗಿನ ಟೆಂಡರುಗಳ ಪರಿಶೀಲನೆ ಹಾಗೂ ಅನುಮೊದನೆಗಾಗಿ ಮುಖ್ಯ ಇಂಜಿನೀಯರ್, ಭದ್ರಾ ಮೇಲ್ದಂಡೆ ಯೋಜನೆ ವಲಯ ಚಿತ್ರದುರ್ಗ ಮಟ್ಟದಲ್ಲಿ ಕೆಳಕಂಡಂತೆ ಟೆಂಡರ್ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

- ಟೆಂಡರ ಅನುಮೋದನೆ ಪ್ರಾಧಿಕಾರ : ಮುಖ್ಯ ಇಂಜಿನೀಯರ
- ಟೆಂಡರ್ ತೆರೆಯುವ ಮತ್ತು ಟೆಂಡರ್ ಪರಿಶೀಲನ ಪ್ರಾಧಿಕಾರ : ಅಧೀಕ್ಷಕ ಅಭಿಯಂತರರು
- ಟೆಂಡರ್ ಆಹ್ವಾನಿಸುವ ಪ್ರಾಧಿಕಾರ : ಕಾರ್ಯಪಾಲಕ ಅಭಿಯಂತರರು

II. ರೂ. 2.50 ಕೋಟಿಗಳವರೆಗಿನ ಟೆಂಡರುಗಳ ಪರಿಶೀಲನೆ ಹಾಗೂ ಅನುಮೊದನೆಗಾಗಿ ಮುಖ್ಯ ಇಂಜಿನೀಯರ್, ಎತ್ತಿನ ಹೊಳೆ ಯೋಜನೆಯ ವಲಯ ತುಮಕೂರು ಮಟ್ಟದಲ್ಲಿ ಕೆಳಕಂಡಂತೆ ಟೆಂಡರ್ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

- ಟೆಂಡರ ಅನುಮೋದನೆ ಪ್ರಾಧಿಕಾರ : ಮುಖ್ಯ ಇಂಜಿನೀಯರ್
- ಟೆಂಡರ್ ತೆರೆಯುವ ಮತ್ತು ಟೆಂಡರ್ ಪರಿಶೀಲನ ಪ್ರಾಧಿಕಾರ : ಅಧೀಕ್ಷಕ ಅಭಿಯಂತರರು
- ಟೆಂಡರ್ ಆಹ್ವಾನಿಸುವ ಪ್ರಾಧಿಕಾರ : ಕಾರ್ಯಪಾಲಕ ಅಭಿಯಂತರರು

III. ರೂ. 2.50 ಕೋಟಿಯಿಂದ ರೂ.5.00 ಕೋಟಿಯವರೆಗಿನ ಟೆಂಡರುಗಳ ಪರಿಶೀಲನೆ ಹಾಗೂ ಅನುಮೋದನೆಗಾಗಿ ವ್ಯವಸ್ಥಾಪಕ ನಿರ್ದೇಶಕರ ಮಟ್ಟದಲ್ಲಿ ಕೆಳಕಂಡಂತೆ ಟೆಂಡರ್ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

- ಟೆಂಡರ ಅನುಮೋದನೆ ಪ್ರಾಧಿಕಾರ : ವ್ಯವಸ್ಥಾಪಕ ನಿರ್ದೇಶಕರು
- ಟೆಂಡರ್ ತೆರೆಯುವ ಮತ್ತು ಟೆಂಡರ್ ಪರಿಶೀಲನ ಪ್ರಾಧಿಕಾರ : ಸಂಬಂಧಿತ ಮುಖ್ಯ ಇಂಜಿನೀಯರ ಮತ್ತು ಅಧೀಕ್ಷಕ ಇಂಜಿನಿಯರ್
- ಟೆಂಡರ್ ಆಹ್ವಾನಿಸುವ ಪ್ರಾಧಿಕಾರ : ಕಾರ್ಯಪಾಲಕ ಅಭಿಯಂತರರು

IV. ರೂ. 5.00 ಕೋಟಿಗೂ ಮೀರಿದ ಟೆಂಡರುಗಳ ಪರಿಶೀಲನೆ ಹಾಗೂ ಅನುಮೋದನೆಗಾಗಿ ನಿಗಮದ ಮಟ್ಟದಲ್ಲಿ ಕೆಳಕಂಡಂತೆ ಟೆಂಡರ್ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

- ಟೆಂಡರ ಅನುಮೋದನೆ ಪ್ರಾಧಿಕಾರ : ನಿಗಮದ ಮಂಡಳಿ
- ಟೆಂಡರ್ ಪರಿಶೀಲನಾ ಪ್ರಾಧಿಕಾರ : ಟೆಂಡರ್ ಪರಿಶೀಲನಾ ಸಮಿತಿ
- ಟೆಂಡರ್ ತೆರೆಯುವ ಪ್ರಾಧಿಕಾರ : ಸಂಬಂಧಿತ ಮುಖ್ಯಅಭಿಯಂತರರು ಮತ್ತು ಅಧೀಕ್ಷಕ ಅಭಿಯಂತರರು
- ಟೆಂಡರ್ ಆಹ್ವಾನಿಸುವ ಪ್ರಾಧಿಕಾರ : ಕಾರ್ಯಪಾಲಕ ಅಭಿಯಂತರರು.

ರೂ.5.00 ಕೋಟಿಗೂ ಮೀರಿದ ಟೆಂಡರ್‌ಗಳ ಟೆಂಡರ್ ಪರೀಶಿಲಿಸಲು ಸಮಿತಿಯನ್ನು ಈ ಕೆಳಕಂಡಂತೆ ರಚಿಸಲಾಗಿದೆ.

| ಕ್ರ ಸಂ. | ಹುದ್ದೆ | ಅಧಿಕಾರಿಗಳು |
|---|---|---|
| 1 | ಅಧ್ಯಕ್ಷರು | ಕಾರ್ಯದರ್ಶಿಗಳು ಜಲ ಸಂಪನ್ಮೂಲ ಇಲಾಖೆ |
| 2. | ಸದಸ್ಯ ಕಾರ್ಯದರ್ಶಿ | ನಿಗಮದ ವ್ಯವಸ್ಥಾಪಕ ನಿರ್ದೇಶಕರು |
| 3. | ಸದಸ್ಯರು | ಸಂಬಂಧಿಸಿದ ವಲಯದ ಮುಖ್ಯ ಅಭಿಯಂತರರು |
| 4. | ಸದಸ್ಯರು | ಪ್ರೊ.ವಿ.ಪಿ.ಹುಗ್ಗಿ, ಪ್ರಾಂಶುಪಾಲರು, ಫ.ಗು.ಹಳಕಟ್ಟಿ ತಾಂತ್ರಿಕ ಮಹಾವಿದ್ಯಾಲಯ, ವಿಜಯಪುರ |
| 5. | ಸದಸ್ಯರು | ಶ್ರೀ.ಜೆ.ಆರ್.ಕೆ.ಕರಡಿ, ನಿವೃತ್ತ ಪ್ರಧಾನ ಇಂಜಿನಿಯರ್. |
| 6. | ಸದಸ್ಯರು | ಶ್ರೀ.ಪಿ.ಕೆ.ರೂಪನಗುಡಿ, ನಿವೃತ್ತ ಮುಖ್ಯ ಇಂಜಿನಿಯರ್, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ |

ಮೇಲ್ಕಂಡ ಸಮಿತಿಗಳು ಸರ್ಕಾರದ ಆದೇಶ ಸಂಖ್ಯೆ:ಜಸಇ 253 ಕೆಬಿಎನ್ 2013 ಬೆಂಗಳೂರು ದಿನಾಂಕ:28/10/2013 ರಲ್ಲಿ ಸೂಚಿಸಿರುವ ಕಾರ್ಯವ್ಯಾಪ್ತಿಯನ್ನು ಹೊಂದಿದ್ದು, ಸದರಿ ಆದೇಶದಲ್ಲಿನ ಮಾರ್ಗದರ್ಶಿ ಸೂತ್ರಗಳ ಅನುಸಾರ ಕಾರ್ಯ ನಿರ್ವಹಿಸುವುದು. ಸದರಿ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಸರ್ಕಾರವು ಅನುಮೋದಿಸಿದಂತೆ ಉಪಸ್ಥಿತಿ ಭತ್ಯೆ, ಪ್ರಯಾಣ ಭತ್ಯೆ ಮತ್ತು ಕಾಮಗಾರಿ ಪರಿವೀಕ್ಷಣಾ ಭತ್ಯೆಗಳ ಸೌಲಭ್ಯಗಳನ್ನು ನಿಯಮಾನುಸಾರ ನೀಡಲಾಗುವುದು.

ವ್ಯವಸ್ಥಾಪಕ ನಿರ್ದೇಶಕರು
ವಿ.ಜ.ನಿ.ನಿ., ಬೆಂಗಳೂರು.

<u>ಪ್ರತಿಯನ್ನು ಮಾಹಿತಿಯನ್ನು ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.</u>

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರ ಆದ್ಯ ಮಾಹಿತಿಗಾಗಿ.
2) ಸರ್ಕಾರದ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರ ಆದ್ಯ ಮಾಹಿತಿಗಾಗಿ.
3) ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು ಇವರ ಆದ್ಯ ಮಾಹಿತಿಗಾಗಿ.
4) ಅಧ್ಯಕ್ಷರು/ಸದಸ್ಯರುಗಳು, ವಿವಿಧ ಹಂತಗಳ ನಿಗಮದ ಅಂದಾಜು ಪರಿಶೀಲನಾ ಮತ್ತು ಟೆಂಡರ್ ಪರಿಶೀಲನಾ ಸಮಿತಿಗಳು.
5) ಮುಖ್ಯ ಇಂಜಿನಿಯರ್, ಭದ್ರಾ ಮೇಲ್ದಂಡೆ ಯೋಜನಾ ವಲಯ, ವಿ.ಜಿ.ನಿ.ನಿ., ಚಿತ್ರದುರ್ಗ.
6) ಮುಖ್ಯ ಇಂಜಿನಿಯರ್, ಎತ್ತಿನ ಹೊಳೆ ಯೋಜನಾ ವಲಯ, ವಿ.ಜಿ.ನಿ.ನಿ., ತುಮಕೂರು.
7) ಮುಖ್ಯ ಆಡಳಿತಾಧಿಕಾರಿಗಳು, ಕೇಂದ್ರ ಕಛೇರಿ, ವಿ.ಜ.ನಿ.ನಿ., ಚಿತ್ರದುರ್ಗ.
8) ಮುಖ್ಯ ಲೆಕ್ಕಾಧಿಕಾರಿಗಳು, ಕೇಂದ್ರ ಕಛೇರಿ, ವಿ.ಜ.ನಿ.ನಿ., ಚಿತ್ರದುರ್ಗ.
9) ಕಂಪನಿ ಕಾರ್ಯದರ್ಶಿಗಳು, ನೊಂದಾಯಿತ ಕಛೇರಿ, ವಿ.ಜ.ನಿ.ನಿ., ಬೆಂಗಳೂರು.
10) ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆರ್ಥಿಕ),ನೊಂದಾಯಿತ ಕಛೇರಿ,ವಿ.ಜ.ನಿ.ನಿ., ಬೆಂಗಳೂರು.
11) ಅಧೀಕ್ಷಕ ಅಭಿಯಂತರರು ಮತ್ತು ಕಾರ್ಯಪಾಲಕ ಇಂಜಿನಿಯರ್, ನೊಂದಾಯಿತ ಕಛೇರಿ, ವಿ.ಜ.ನಿ.ನಿ., ಬೆಂಗಳೂರು.
12) ನಿಗಮದ ಎಲ್ಲ ಅಧೀಕ್ಷಕ ಅಭಿಯಂತರರು/ ಕಾರ್ಯಪಾಲಕ ಅಭಿಯಂತರರು,
13) ನಿಗಮದ ನೊಂದಾಯಿತ ಕಛೇರಿಯ ಎಲ್ಲ ತಾಂತ್ರಿಕ ಸಿಬ್ಬಂದಿ.

# ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 43 ವಿಬ್ಯಾಇ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 13.03.2017.

ಇಂದ

ಸರ್ಕಾರದ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ,
ಕರ್ನಾಟಕ ಸರ್ಕಾರ,
ಬೆಂಗಳೂರು-560001.

ಇವರಿಗೆ

ವ್ಯವಸ್ಥಾಪಕ ನಿರ್ದೇಶಕರು,
ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ,
ಕಾಫಿ ಬೋರ್ಡ್ ಕಟ್ಟಡ,
ಬೆಂಗಳೂರು.

VISVESVARAYA JALA NIGAM
0465
14 MAR
BENGALU

ಮಾನ್ಯರೇ,

ವಿಷಯ: ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಅಡಿಯಲ್ಲಿ ವಿವಿಧ ಹಂತಗಳ ಅಂದಾಜು ಪರಿಶೀಲನಾ ಸಮಿತಿ (Estimate Review Committee-ERC) ಹಾಗೂ ಟೆಂಡರ್ ಪರಿಶೀಲನಾ ಸಮಿತಿ (Tender scrutiny Committee-Tr.Sc.Com) ರಚಿಸುವ ಬಗ್ಗೆ.

ಉಲ್ಲೇಖ: 1. ತಮ್ಮ ಪತ್ರ ಸಂಖ್ಯೆ: ವಿಜನಿನಿ/ಸಮಿತಿಗಳ ರಚನೆ 2016-17/379,ದಿ:28.02.2017.
2. ಸರ್ಕಾರಿ ಆದೇಶ ಸಂಖ್ಯೆ: ಜಸಇ 253 ಕೆಬಿಎನ್ 2013, ದಿ: 28.10.2013.

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಉಲ್ಲೇಖಿತ ಪತ್ರ ದಿ: 28.02.2017ರ ಪ್ರಸ್ತಾವನೆ ಕಡೆ ಗಮನ ಸೆಳೆಯಲಾಗಿದೆ. ಸದರಿ ಪತ್ರದಲ್ಲಿ ಕೋರಿರುವಂತೆ ವಿಶ್ವೇಶ್ವರಯ್ಯ ಜಲ ನಿಗಮದಡಿ ಬರುವ ವಿವಿಧ ಹಂತಗಳ ಅಂದಾಜು ಪರಿಶೀಲನಾ ಸಮಿತಿ (Estimate Review Committee-ERC) ಹಾಗೂ ಟೆಂಡರ್ ಪರಿಶೀಲನಾ ಸಮಿತಿ (Tender scrutiny Committee-Tr.Sc.Com)ಗಳಿಗೆ ಅಧಿಕಾರಿ ಸದಸ್ಯರನ್ನು ಇತರೆ ನಿಗಮಗಳಲ್ಲಿ ಇರುವಂತೆ ಉಲ್ಲೇಖಿತ(2)ರ ಸರ್ಕಾರಿ ಆದೇಶ ದಿ: 28.10.2013ರನ್ವಯ ನೇಮಿಸಿ ಮತ್ತು ವಿಶ್ವೇಶ್ವರಯ್ಯ ಜಲ ನಿಗಮದಡಿ ಬರುವ ವಿವಿಧ ಹಂತಗಳ ಅಂದಾಜು ಪರಿಶೀಲನಾ ಸಮಿತಿ (Estimate Review Committee-ERC) ಹಾಗೂ ಟೆಂಡರ್ ಪರಿಶೀಲನಾ ಸಮಿತಿ (Tender scrutiny Committee-Tr.Sc.Com) ಗಳನ್ನು ಈ ಕೆಳಕಂಡ ಅಧಿಕಾರೇತರ ಸದಸ್ಯರನ್ನು ನೇಮಿಸಿ ಉಲ್ಲೇಖಿತ(2)ರ ಸರ್ಕಾರದ ಆದೇಶ ದಿ: 28.10.2013 ರನ್ವಯ ರಚಿಸಲು ಅನುಮತಿ ನೀಡಲಾಗಿದೆ ಎಂದು ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

**1. ವಲಯ ಮಟ್ಟದ ಅಂದಾಜು ಪರಿಶೀಲನಾ ಸಮಿತಿ(ಭದ್ರಾ ಮೇಲ್ದಂಡೆ ಯೋಜನೆ ವಲಯ, ಚಿತ್ರದುರ್ಗ)**

| ಕ್ರ.ಸಂ | ಅಧಿಕಾರೇತರ ಸದಸ್ಯರು | ಸದಸ್ಯರ ಹೆಸರು |
|---|---|---|
| 1 | ಅಧಿಕಾರೇತರ ಸದಸ್ಯರು(ತಾಂತ್ರಿಕ ಸಮಿತಿಯ ಸದಸ್ಯರು ಅಥವಾ ತಾಂತ್ರಿಕ ಪರಿಣಿತಿಯುಳ್ಳ ವ್ಯಕ್ತಿ) | ಪ್ರೊ. ವಿ.ಪಿ.ಹುಗ್ಗಿ, ಪ್ರಾಂಶುಪಾಲರು, ಫ.ಗು.ಹಳಕಟ್ಟಿ ತಾಂತ್ರಿಕ ಮಹಾವಿದ್ಯಾಲಯ, ವಿಜಯಪುರ. |
| 2 | ಅಧಿಕಾರೇತರ ಸದಸ್ಯರು(ತಾಂತ್ರಿಕ ತಜ್ಞರು) | ಪ್ರೊ. ರೂಪನಗುಡಿ, ನಿವೃತ್ತ ಮುಖ್ಯ ಇಂಜಿನಿಯರ್, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ |

...2

2. ವಲಯ ಮಟ್ಟದ ಅಂದಾಜು ಪರಿಶೀಲನಾ ಸಮಿತಿ(ಎತ್ತಿನಹೊಳೆ ಯೋಜನೆ ವಲಯ, ತುಮಕೂರು).

| ಕ್ರ.ಸಂ | ಅಧಿಕಾರೇತರ ಸದಸ್ಯರು | ಸದಸ್ಯರ ಹೆಸರು |
|---|---|---|
| 1 | ಅಧಿಕಾರೇತರ ಸದಸ್ಯರು(ತಾಂತ್ರಿಕ ಸಮಿತಿಯ ಸದಸ್ಯರು ಅಥವಾ ತಾಂತ್ರಿಕ ಪರಿಣತಿಯುಳ್ಳ ವ್ಯಕ್ತಿ) | ಪ್ರೊ. ವಿ.ಪಿ.ಹುಗ್ಗಿ, ಪ್ರಾಂಶುಪಾಲರು, ಫ.ಗು.ಹಳಕಟ್ಟಿ ತಾಂತ್ರಿಕ ಮಹಾವಿದ್ಯಾಲಯ, ವಿಜಯಪುರ. |
| 2 | ಅಧಿಕಾರೇತರ ಸದಸ್ಯರು(ತಾಂತ್ರಿಕ ತಜ್ಞರು) | ಶ್ರೀ ಹೆಚ್. ವಿ. ಈಶ್ವರಯ್ಯ, ನಿವೃತ್ತ ಮುಖ್ಯ ಇಂಜಿನಿಯರ್, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ. |

3. ನಿಗಮ ಹಂತದ ಅಂದಾಜು ಪರಿಶೀಲನಾ ಸಮಿತಿ(ವಿಶ್ವೇಶ್ವರಯ್ಯ ಜಲ ನಿಗಮ)

| ಕ್ರ.ಸಂ | ಅಧಿಕಾರೇತರ ಸದಸ್ಯರು | ಸದಸ್ಯರ ಹೆಸರು |
|---|---|---|
| 1 | ಅಧಿಕಾರೇತರ ಸದಸ್ಯರು(ತಾಂತ್ರಿಕ ಸಮಿತಿಯ ಸದಸ್ಯರು ಅಥವಾ ತಾಂತ್ರಿಕ ತಜ್ಞರು) | ಪ್ರೊ. ವಿ.ಪಿ.ಹುಗ್ಗಿ, ಪ್ರಾಂಶುಪಾಲರು, ಫ.ಗು.ಹಳಕಟ್ಟಿ ತಾಂತ್ರಿಕ ಮಹಾವಿದ್ಯಾಲಯ, ವಿಜಯಪುರ. |
| 2 | ಅಧಿಕಾರೇತರ ಸದಸ್ಯರು(ತಾಂತ್ರಿಕ ತಜ್ಞರು) | ಶ್ರೀ ಜೆ.ಆರ್.ಕೆ.ಕರಡಿ, ನಿವೃತ್ತ ಪ್ರಧಾನ ಇಂಜಿನಿಯರ್. |
| 3 | ಅಧಿಕಾರೇತರ ಸದಸ್ಯರು(ತಾಂತ್ರಿಕ ತಜ್ಞರು) | ಪ್ರೊ. ರೂಪನಗುಡಿ, ನಿವೃತ್ತ ಮುಖ್ಯ ಇಂಜಿನಿಯರ್, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ. |

4. ನಿಗಮದ ಮಟ್ಟದ ಟೆಂಡರ್ ಪರಿಶೀಲನಾ ಸಮಿತಿ (ವಿಶ್ವೇಶ್ವರಯ್ಯ ಜಲ ನಿಗಮ)

| ಕ್ರ.ಸಂ | ಅಧಿಕಾರೇತರ ಸದಸ್ಯರು | ಸದಸ್ಯರ ಹೆಸರು |
|---|---|---|
| 1 | ಅಧಿಕಾರೇತರ ಸದಸ್ಯರು(ತಾಂತ್ರಿಕ ಸಮಿತಿಯ ಸದಸ್ಯರು ಅಥವಾ ತಾಂತ್ರಿಕ ತಜ್ಞರು) | ಪ್ರೊ. ವಿ.ಪಿ.ಹುಗ್ಗಿ, ಪ್ರಾಂಶುಪಾಲರು, ಫ.ಗು.ಹಳಕಟ್ಟಿ ತಾಂತ್ರಿಕ ಮಹಾವಿದ್ಯಾಲಯ, ವಿಜಯಪುರ. |
| 2 | ಅಧಿಕಾರೇತರ ಸದಸ್ಯರು(ತಾಂತ್ರಿಕ ತಜ್ಞರು) | ಶ್ರೀ ಜೆ.ಆರ್.ಕೆ.ಕರಡಿ, ನಿವೃತ್ತ ಪ್ರಧಾನ ಇಂಜಿನಿಯರ್. |
| 3 | ಅಧಿಕಾರೇತರ ಸದಸ್ಯರು(ತಾಂತ್ರಿಕ ತಜ್ಞರು) | ಪ್ರೊ. ರೂಪನಗುಡಿ, ನಿವೃತ್ತ ಮುಖ್ಯ ಇಂಜಿನಿಯರ್, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ. |

ತಮ್ಮ ವಿಶ್ವಾಸಿ,

13/3/17

(ಕೆ.ಎಸ್. ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-4),
ಜಲ ಸಂಪನ್ಮೂಲ ಇಲಾಖೆ.